**ಸಾಕ್ಷಿಯನ್ನು ದಿನಾಂಕಃ 03-01-2026 ರಂದು ಪುನಃ ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ವಾದಿ ಪರ ಶ್ರೀ ಐ.ಎಚ್.ಎಸ್ ವಕೀಲರಿಂದ.**

ಈ ದಾವೆಯನ್ನು ಮಂಜು ತಟ್ಟಿಮನಿ ಇವರ ತಮ್ಮ ಹಾಕಿರುತ್ತಾನೆ. ನನ್ನ ಸಾಕ್ಷ ಪ್ರಮಾಣ ಪತ್ರ ಕನ್ನಡ ಭಾಷೆಯಲ್ಲಿ ಇರುತ್ತದೆ. ಅದನ್ನು ತಯಾರು ಮಾಡಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ನಾನು ದಾವಾ ಆಸ್ತಿಯ ರಿ.ಸ.ನಂ.4/1 ನ್ನು ಖರೀದಿ ಮಾಡುವ ಸಮಯದಲ್ಲಿ ಪ್ರತಿವಾದಿ ನಂ.1 ರವರಿಗೆ ಸದರಿ ಜಮೀನು ವಾಟ್ನಿಯಲ್ಲಿ ಬಂದಿರುತ್ತದೆ ಎಂದು ತಿಳಿದು ಬಂದಿರುತ್ತದೆ. ನಾನು ವಾಟ್ನಿ ಪತ್ರವನ್ನು ನೋಡಿರುವುದಿಲ್ಲ. ಸದರಿ ರಿ.ಸ.ನಂ.4/1 ಇದು ಮೊದಲು ಪ್ರತಿವಾದಿ ನಂ.1 ರವರ ತಂದೆಯಾದ ವೆಂಕಪ್ಪ ಇವರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಇದ್ದಿರಬಹುದು ಎಂದು ನುಡಿಯುತ್ತಾರೆ. ವೆಂಕಪ್ಪ ಇವರಿಗೆ ವಾದಿ ನಂ.1 ಮತ್ತು ಪ್ರತಿವಾದಿ ನಂ.1 ಇವರು ಗಂಡು ಮಕ್ಕಳು ಆಗಬೇಕು ಮತ್ತು ವಾದಿ ನಂ.2 ಇವಳು ವೆಂಕಪ್ಪ ಇವರ ಹೆಂಡತಿಯಾಗಬೇಕು ಎಂದರೆ ಸರಿ. ವೆಂಕಪ್ಪ ಇವರು ತೀರಿಕೊಂಡ ನಂತರ ಅವನ ಹೆಂಡತಿ ಮತ್ತು ಮಕ್ಕಳ ಹೆಸರುಗಳು ವಾರಸಾ ಪ್ರಕಾರ ದಾವಾ ಆಸ್ತಿಗಳ ದಾಖಲಾತಿಗಳಲ್ಲಿ ನಮೂದು ಆದವು ಎಂದರೆ ಸರಿ. ತದನಂತರ ವಾದಿಯರು ಮತ್ತು ಪ್ರತಿವಾದಿ ನಂ.1 ರವರು ದಾವಾ ಆಸ್ತಿಗಳ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇದ್ದುಕೊಂಡು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿಯು ದಾವಾ ಆಸ್ತಿ ರಿಸ ನಂ.4/1 ರ ಸ್ವಾಧೀನತೆಯಲ್ಲಿ ನಾನು ಇರುತ್ತೇನೆ ಎಂದು ನುಡಿಯುತ್ತಾರೆ.

ವಾದಿ ನಂ.1 ಮತ್ತು ಪ್ರತಿವಾದಿ ನಂ.1 ರವರ ನಡುವೆ ವಾಟ್ನಿ ಪ್ರತಿವಾದಿ ನಂ.1 ರವರು ಹೇಳಿದ ಹಾಗೆ ನ್ಯಾಯಾಲಯದಲ್ಲಿ ಆಗಿರುತ್ತದೆ. ಸದರಿ ವಾಟ್ನಿ ಆಗಿರುವ ಅಸಲ ದಾವಾ ನಂಬರ ನನಗೆ ಮಾಹಿತಿ ಇರುವುದಿಲ್ಲ. ಸದರಿ ವಾಟ್ನಿಯಲ್ಲಿ ಯಾರು ಹಿರಿಯರು ಇದ್ದರು ಎಂದು ನಾನು ತಿಳಿದುಕೊಂಡಿರುವುದಿಲ್ಲ.

ಪ್ರತಿವಾದಿ ನಂ.1 ಇವರು ಮೇಲಿಂದ ಮೇಲೆ ನನ್ನ ಹತ್ತಿರ ಕೈಗಡ ಸಾಲವನ್ನು ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಕೈಗಡ ಸಾಲವನ್ನು ನೀಡಿ ಸಾಲ ಪಡೆದುಕೊಂಡವರಿಂದ ಭದ್ರತೆಗಾಗಿ ದಾಖಲಾತಿಗಳನ್ನು ಬರೆದುಕೊಳ್ಳುವ ರೂಢಿ ನನಗೆ ಇತ್ತು ಎಂದರೆ ಸರಿಯಲ್ಲ.

ಪ್ರತಿವಾದಿ ನಂ.1 ರವರಿಗೆ ಎಷ್ಟು ಮಕ್ಕಳು ಇರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿ ನಂ.1 ರವರಿಗೆ ದಾವಾ ಆಸ್ತಿ ರಿ.ಸ.ನಂ.4/1 ನ್ನು ಮಾರಾಟ ಮಾಡುವ ಸಮಯದಲ್ಲಿ ಅವನಿಗೆ ಯಾವ ಅಡಚಣೆ ಇತ್ತು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಪ್ರತಿವಾದಿ ನಂ.1 ರವರಿಗೆ ವಾದಿ ನಂ.1 ತಮ್ಮನಿರುವುದು ಗೊತ್ತಿತ್ತು. ನಾನು ಈ ಮೇಲೆ ನಮೂದಿಸಿದ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಖರೀದಿ ಪತ್ರದ ಮೇಲೆ ವಾದಿಯರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ಸದರಿ ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ನಾನು ವಾದಿಯರಿಗೆ ಸದರಿ ಆಸ್ತಿಯನ್ನು ಖರೀದಿ ಮಾಡುತ್ತಿದ್ದೇನೆ ಎಂದು ತಿಳಿಸಿರುವುದಿಲ್ಲ.

ದಾವಾ ಆಸ್ತಿ ರಿಸ ನಂ.4/1 ಇದು ನೀರಾವರಿ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ಖರೀದಿ ಮಾಡುವ ಸಮಯದಲ್ಲಿ ಒಣ ಬೇಸಾಯ ಜಮೀನು ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಈಗಿನ ಮಾರುಕಟ್ಟೆ ಮೌಲ್ಯ ನನಗೆ ಮಾಹಿತಿ ಇರುವುದಿಲ್ಲ. ಸದರಿ ಆಸ್ತಿಯನ್ನು ನಾನು ಒಟ್ಟು

ರೂ.8,47,000/- ಗಳಿಗೆ ಖರೀದಿ ಮಾಡಿರುತ್ತೇನೆ. ಸದರಿ ಜಮೀನವನ್ನು ಒಂದು ಎಕರೆಗೆ ಎಷ್ಟು ಮೌಲ್ಯ ಮಾಡಿ ಖರೀದಿ ಮಾಡಿರುತ್ತಿರಿ ಎಂದರೆ ಸಾಕ್ಷಿಯು ಲೆಕ್ಕ ಮಾಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.

ಸದರಿ ದಾವಾ ಆಸ್ತಿಯನ್ನು ನಾನು ಖರೀದಿ ಮಾಡುವ ಸಮಯದಲ್ಲಿ ಪ್ರತಿವಾದಿ ನಂ.1 ರವರ ಪರವಾಗಿ ಹಿರಿಯರು ಅಂತಾ ಗೋಪಾಲ ಸದಾಶೀವ ಹೂಗಾರ ಮತ್ತು ಬಸವರಾಜ ಮಲ್ಲಿಕಾರ್ಜುನಪ್ಪ ಮಗದುಮ ಇವರು ಬಂದಿದ್ದರು. ಪ್ರತಿವಾದಿ ನಂ.1 ಮತ್ತು 2 ಕೂಡಿಕೊಂಡು ದಾವಾ ಆಸ್ತಿ ರಿ.ಸ.ನಂ.4/1 ನ್ನು ನನಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡುವ ಅವಶ್ಯಕತೆ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ದಾವಾ ಜಮೀನದಲ್ಲಿ ವಾದಿಯರಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ರಿಸ ನಂ.4/1 ಇದು ವಾದಿಯರ ಮತ್ತು ಪ್ರತಿವಾದಿ ನಂ.1 ರವರ ಪೀತ್ರಾರ್ಜಿತ ಆಸ್ತಿ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಆಸ್ತಿ ಪೀತ್ರಾರ್ಜಿತ ಆಸ್ತಿ ಆಗಿರುವುದರಿಂದ ಪ್ರತಿವಾದಿ ನಂ.1 ರವರೆ ತಾವು ಒಬ್ಬರೆ ಸದರಿ ಆಸ್ತಿಯನ್ನು ಮಾರಾಟ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೂ ಸಹ ವಾದಿಯರು ಮತ್ತು ಪ್ರತಿವಾದಿ ನಂ.1 ರವರು ನಾನು ಖರೀದಿ ಮಾಡಿದ ಆಸ್ತಿಯ ಜಂಟಿ ಸ್ವಾಧೀನತೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವುದೇ ಸಮಯದಲ್ಲಿ ಸದರಿ ಆಸ್ತಿಯ ಸ್ವಾಧೀನತೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ 11-03-2024 ರಂದು ದಾವಾ ಆಸ್ತಿ ರಿ.ಸ.ನಂ.4/1 ರ ಸ್ವಾದೀನತೆಯನ್ನು ಪಡೆಯುವ ಉದ್ದೇಶದಿಂದ ನಾನು ಅದರಲ್ಲಿ ಅತೀ ಕ್ರಮಣ ಮಾಡಲು ಪ್ರಯತ್ನಪಟ್ಟಿರುತ್ತೇನೆ ಎಂದರೆ ಸಾಕ್ಷಿಯು ನಾನೇ ಸ್ವಾಧೀನತೆಯಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ಜಮೀನಕ್ಕೆ ಬಂದು ವಾದಿಯರ ಸದರಿ ಜಮೀನದ ಜಂಟಿ ಸ್ವಾಧೀನತೆಗೆ ಹರಕತ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಜಮೀನದಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನದು ಪ್ರತಿವಾದಿ ನಂ.1 ರವರ ಜೊತೆ ಹಣದ ವ್ಯವಹಾರ ಇತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿಃ**

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.02.17 17:56:46 +0530